**ಭೂತಾನ್‌ನ ನಾಲ್ಕನೇ ದೊರೆಯನ್ನು ಭೇಟಿ ಮಾಡಿ, ಜಾಗತಿಕ ಶಾಂತಿ ಪ್ರಾರ್ಥನಾ ಉತ್ಸವದಲ್ಲಿ ಭಾಗಿಯಾದ ಪ್ರಧಾನಿ (ನವೆಂಬರ್ 12, 2025)**

ನವೆಂಬರ್ 12, 2025

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂದು ಥಿಂಪುವಿನಲ್ಲಿ ಭೂತಾನ್‌ನ ನಾಲ್ಕನೇ ರಾಜ ಜಿಗ್ಮೆ ಸಿಂಗ್ಯೆ ವಾಂಗ್‌ಚುಕ್ ಅವರನ್ನು ಭೇಟಿಯಾಗಿ ಔಪಚಾರಿಕ ಸಭೆ ನಡೆಸಿದರು.

2. ಪ್ರಧಾನಮಂತ್ರಿಯವರು ಗೌರವಾನ್ವಿತ ನಾಲ್ಕನೇ ದೊರೆಯ 70 ನೇ ಜನ್ಮ ದಿನದ ಪ್ರಯುಕ್ತ ಅಭಿನಂದನೆ ತಿಳಿಸಿದರು ಹಾಗೂ ಅವರ ನಿರಂತರ ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಭಾರತ ಸರ್ಕಾರ ಮತ್ತು ಜನರ ಪರವಾಗಿ ಶುಭಾಶಯಗಳು ಮತ್ತು ಪ್ರಾರ್ಥನೆಗಳನ್ನು ತಿಳಿಸಿದರು. ಭಾರತ-ಭೂತಾನ್ ಸ್ನೇಹವನ್ನು ಮತ್ತಷ್ಟು ಬಲಪಡಿಸುವಲ್ಲಿ ನಾಯಕತ್ವ, ಸಲಹೆ ಮತ್ತು ಮಾರ್ಗದರ್ಶನಕ್ಕಾಗಿ ಪ್ರಧಾನಮಂತ್ರಿ ಗೌರವಾನ್ವಿತ ನಾಲ್ಕನೇ ದೊರೆಗೆ ಧನ್ಯವಾದ ಸಲ್ಲಿಸಿದರು. ಉಭಯ ನಾಯಕರು ದ್ವಿಪಕ್ಷೀಯ ಸಂಬಂಧಗಳು ಮತ್ತು ಪರಸ್ಪರ ಹಿತಾಸಕ್ತಿಯ ವಿಷಯಗಳ ಕುರಿತು ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ, ಎರಡು ದೇಶಗಳ ಜನರನ್ನು ಹತ್ತಿರವಾಗಿಸುವ ಹಂಚಿಕೆಯ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಬಂಧಗಳನ್ನು ಅವರು ಒತ್ತಿ ಹೇಳಿದರು.

3. ಥಿಂಪುವಿನಲ್ಲಿ ನಡೆಯುತ್ತಿರುವ ಜಾಗತಿಕ ಶಾಂತಿ ಪ್ರಾರ್ಥನಾ ಉತ್ಸವದ ಭಾಗವಾಗಿ, ಚಾಂಗ್ಲಿಮಿಥಾಂಗ್ ಕ್ರೀಡಾಂಗಣದಲ್ಲಿ ನಡೆದ ಕಾಲಚಕ್ರ ದೀಕ್ಷಾ ಸಮಾರಂಭದಲ್ಲಿ ಪ್ರಧಾನಮಂತ್ರಿಯವರು ಭೂತಾನ್‌ನ ಗೌರವಾನ್ವಿತ ದೊರೆ, ಹಾಗೂ ನಾಲ್ಕನೇ ದೊರೆ ಮತ್ತು ಭೂತಾನ್ ಪ್ರಧಾನಮಂತ್ರಿ ಅವರೊಂದಿಗೆ ಭಾಗಿಯಾದರು. ಭೂತಾನ್‌ನ ಮುಖ್ಯ ಮಠಾಧೀಶರಾದ ಪರಮಪೂಜ್ಯ ಜೆ ಖೆನ್ಪೊ ಅವರು ಪ್ರಾರ್ಥನೆಯ ಅಧ್ಯಕ್ಷತೆ ವಹಿಸಿದ್ದರು.

ಥಿಂಪು

ನವೆಂಬರ್ 12, 2025